



ಪಕ್ಕ ಹಣ್ಣಿನ ಪೆಟ್ಟಿಗೆಗಳನ್ನು ತುಂಬಿಸಿಕೊಂಡ ಲಾರಿ, ಟ್ರಕ್‌ಗಳ ದೃಶ್ಯವು ಉದ್ದಕ್ಕೂ ಕಣ್ಣಿಗೆ ಬೀಳುತ್ತಿತ್ತು. ದಕ್ಷಿಣ ಭಾರತದಲ್ಲಿ ಮಾವಿನ ಹಣ್ಣು ಬೆಳೆಯಂತೆ ಅಲ್ಲಿ ಸೇಬು ಹಣ್ಣಿನ ವೈವಿಧ್ಯ ಕಂಡು ಬರುತ್ತಿತ್ತು. ಹಸಿರು, ಕೊಂಚ ಹಳದಿ, ಕಡುಕೆಂಪು, ಮತ್ತು ಚಿಕ್ಕದಾದ ಚಪ್ಪಟೆಯಾದ ಅನೇಕ ರೀತಿಯ ಸೇಬು ನೋಡಿದೆವು. ಪಿಯರ್ಸ್ ಹಸಿರು ಬಣ್ಣದ ಮೊಟ್ಟೆ ಆಕಾರವನ್ನು ಹೊಂದಿ ಗಿಡಗಳಲ್ಲಿ ತೂಗುತ್ತಿತ್ತು. ಅಲ್ಲಲ್ಲಿ ಇಡಿ ತೋಟದ ಗಿಡಗಳಿಗೆ ಪ್ಲಾಸ್ಟಿಕ್ ಹೊದಿಕೆಯನ್ನು ಹಾಕಲಾಗಿತ್ತು – ಹಿಮಸುರಿದು ಹಣ್ಣು ಹಾಳಾಗಬಾರದೆಂದು.

ಪ್ರತಿ ದಿನ 130ರಿಂದ, 160 ಕಿ.ಮೀ. ಪ್ರಯಾಣವನ್ನು ಮಾಡಲು ಸುಮಾರು 5ರಿಂದ 6 ಗಂಟೆ ತಗಲುತ್ತಿತ್ತು. ಒಂದು ಬೆಟ್ಟವನ್ನು ಹತ್ತುವುದು, ಮತ್ತೆ ಇಳಿಯುವುದು, ತುಂಬಾ ಚಿಕ್ಕದಾದ ರಸ್ತೆಗಳು ಮತ್ತು ತಿರುವುಗಳಿಂದ ಕೂಡಿದ ಪಯಣ ಅದಾಗಿತ್ತು. ಆದರೆ ಅಲ್ಲಿಯ ವಾಹನ ಚಾಲಕರು ಈ ಪ್ರದೇಶದಲ್ಲಿ ವಾಹನ ಚಾಲನೆಯಲ್ಲಿ ಪರಿಣಿತರಾಗಿದ್ದಾರೆ. ಒಬ್ಬರಿಗೊಬ್ಬರು ದಾರಿಯನ್ನು ಕೊಟ್ಟು ಮಾರ್ಗ ಸುಗಮವಾಗುವಂತೆ ಮಾಡುತ್ತಾರೆ. ಅವರದೇ ಆದ ರೀತಿಯನ್ನು ಚೆನ್ನಾಗಿ ಅಳವಡಿಸಿಕೊಂಡು, ಸೌಹಾರ್ದತೆಯಿಂದ ವಾಹನ ನಡೆಸುವುದು ಒಂದು ಅಪೂರ್ವ ಸಂಗತಿ. ಅವರ ಆ ಮನೋಭಾವ ಮೆಚ್ಚಬೇಕಾದದ್ದು.

ನಾವು ಕುಫಿ, ಸರಹನ್‌ಗಳಲ್ಲಿ ಒಂದೊಂದು ದಿನ ತಂಗಿ, ಸಾಂಗ್ಲಾ ಕಡೆ ಹೊರಟೆವು. ನಮ್ಮ ಜೊತೆಯಲ್ಲಿಯೇ ಹಿಮಾಚ್ಛಾದಿತ ಶಿಖರಗಳ ನೋಟ ಸಾಗುತ್ತಿತ್ತು. ಶ್ರೀಕಂಡ್ ಮಹಾದೇವ್ ಪೀಕ್ ನಮಗೆ ಕಾಣುತ್ತಿತ್ತು.

ಸರಹನ್‌ನಲ್ಲಿ 800 ವರ್ಷ ಹಳೆಯದಾದ, 51 ಶಕ್ತಿಪೀಠಗಳಲ್ಲಿ ಒಂದಾದ ಭೀಮಕಾಳಿ ದೇವಸ್ಥಾನವನ್ನು ನೋಡಿದೆವು. ಅಪರೂಪವಾದ ಇಂಡೋ ಟಿಬೆಟಿಯನ್ ಆರ್ಕಿಟೆಕ್ಚರ್‌ನಿಂದ ಅದು ನಿರ್ಮಾಣಗೊಂಡಿತ್ತು. ಮುಂದೆ 85 ಕಿ.ಮೀ. ದೂರದ ಸಾಂಗ್ಲಿ ತಲುಪಿ, ಬಾಸ್ಪ ಮತ್ತು ಸಟ್ಲೆಜ್ ನದಿಗಳು ಹರಿಯುತ್ತಿದ್ದ ಕಣಿವೆಗಳ ಪಕ್ಕದಲ್ಲೇ ಸಾಗಿದೆವು. ಕಮರು ಕೋಟೆಯ ಗೋಪುರವನ್ನು ಕಾಮಾಕ್ಷಿ ದೇವಿಯ ದೇವಸ್ಥಾನವನ್ನು ನೋಡಲು 2 ಕಿ.ಮೀ. ಏರುದಾರಿಯನ್ನು ಕ್ರಮಿಸಬೇಕಾಯಿತು. ಮುಂದೆ ಬತ್ಸೇರಿ ಹಳ್ಳಿಯಲ್ಲಿ ಸ್ವಿಸ್ ಟೆಂಟ್‌ಗಳಲ್ಲಿ ತಂಗಿದೆವು. ಆ ಹಳ್ಳಿಯಲ್ಲಿ ಬದರಿ ನಾರಾಯಣ ಮಂದಿರ ತಲುಪಲು, ಸೇಬು ಗಿಡಗಳಿಂದ ಕೂಡಿದ ಹಳ್ಳಿಯ ಕಾಲುದಾರಿಯನ್ನು ದಾಟಿ ಹೊರಟೆವು. ಮನೆಯ ಬಾಗಿಲುಗಳು, ಸುಂದರ ಮರದ ಕೆತ್ತನೆಯಿಂದ ಆಕರ್ಷಕವಾಗಿತ್ತು. ರಭಸದಿಂದ ಹರಿಯುತ್ತಿದ್ದ ನದಿಗೆ ಅಡ್ಡಲಾಗಿ ಮರದ ಸೇತುವೆಯನ್ನು ದಾಟಿ ಮಂದಿರ ತಲುಪಿದೆವು. ಅನೇಕ ದೇವರುಗಳನ್ನು ಮರದಲ್ಲಿಯೇ ಕೆತ್ತಲಾಗಿತ್ತು.

ಮುಂದಿನ ಚಿತ್ಕುಲಾವನ್ನು ತಲುಪಲು ರಕ್ಷಮ್ ಎಂಬುವ ಸಣ್ಣ ಹಳ್ಳಿಯನ್ನು ದಾಟಿ ಮುಂದುವರೆದವು. ಆ ಹಳ್ಳಿಯಲ್ಲಿ ಯಾವುದೇ ನಾಗರೀಕತೆಯ ಸುಳಿವಿಲ್ಲ. ಮಾರ್ಕೆಟ್, ಪೋಸ್ಟ್ ಆಫೀಸ್, ಪೊಲೀಸ್ ಸ್ಟೇಷನ್ ಇಲ್ಲ. ಅತಿ ಅವಶ್ಯ ವಸ್ತುಗಳನ್ನು ಮಾರಲು ಸಣ್ಣ ಅಂಗಡಿಯನ್ನು ಬಿಟ್ಟು ಬೇರೇನೂ ಇರಲಿಲ್ಲ.

ಚಿತ್ಕುಲಾ ತಲುಪಿದಾಗ ಕಂಡದ್ದು ಹಚ್ಚ ಹಸಿರು ಹುಲ್ಲುಗಾವಲು, ಬೆಟ್ಟಗಳಿಂದ ಹರಿದು ಬರುತ್ತಿದ್ದ ಕಾಲುವೆಗಳು. ಮಂಜು ಕರಗಿ ಹರಿಯುವ ನೀರು ಹಳ್ಳಿಗಳನ್ನು ದಾಟಿ ಸಾಗುತ್ತಿತ್ತು. ಶುಭ್ರವಾದ ಗಾಳಿ ಮತ್ತು ಹಚ್ಚನೆ ಹಸಿರು ಕಣ್ಣುಗಳನ್ನು ತಣಿಸಿತು. ಇಲ್ಲಿನ ಮುಖ್ಯ ಬೆಳೆ ಆಲೂಗಡ್ಡೆ ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಟ ಮಟ್ಟದ್ದೆಂದು ಗುರುತಿಸಿಕೊಂಡಿದೆ. ಅದರ ಬೆಲೆಯೂ ದುಬಾರಿ.

ಚಿತ್ಕುಲಾ ಹಳ್ಳಿಯಲ್ಲಿ ಸರಳತೆಯಲ್ಲಿನ ಸೌಂದರ್ಯವನ್ನು ನೋಡಿದೆವು. ಅಲ್ಲಿ ಎಲ್ಲರೂ ಕೂಡಿ ಹಬ್ಬಗಳನ್ನು ಆಚರಿಸುತ್ತಾರಂತೆ. ನಮ್ಮನ್ನು ನೋಡಿ ಸಮಾರಂಭಕ್ಕಾಗಿ ಮಾಡುತ್ತಿದ್ದ ಪೂರಿಗಳನ್ನು ನಮಗೆ ಸವಿಯುವಂತೆ ನೀಡಿದರು. ಅಲ್ಲಿ ಆರ್ಮಿ ಬೇಸ್ ಇದೆ, ಮುಂದೆ ಟಿಬೆಟ್‌ನ ಸರಹದ್ದು ಪ್ರಾರಂಭವಾಗುತ್ತದೆ.

ನಮ್ಮ ವಾಹನ ನಿಂತಿದ್ದು ಏಕೆಂದು ನೋಡಿದರೆ, ಸಾವಿರಾರು ದಷ್ಟ ಪುಷ್ಟ ಕುರಿಗಳ ಮಂದೆ ಬರುತ್ತಿತ್ತು. ದಪ್ಪವಾದ ಉಣ್ಣೆಯನ್ನು ಹೊದ್ದ ಕಪ್ಪು ಬಿಳಿ ಬಣ್ಣದ ಕುರಿಗಳು ಒತ್ತೊತ್ತಾಗಿ ಸಾಗುತ್ತಲೇ ಇದ್ದವು. ಬಯಲಿನಲ್ಲಿ ಯಾಕ್‌ಗಳು ಮೇಯುತ್ತಿದ್ದವು. ಜನ ಸಂಚಾರವೇ ಇಲ್ಲ ಎಂದು ಯೋಚಿಸುತ್ತಿದ್ದಾಗ ಸಮವಸ್ತ್ರ ಧರಿಸಿದ್ದ ಮಕ್ಕಳ ಸಾಲು ಬೆಟ್ಟದ ಕಣಿವೆಗಳಿಂದ ಇಳಿದು ರಸ್ತೆ ಹಾದೂ ಕೆಳಗೆ ಇಳಿಯುತ್ತಿತ್ತು. ಕಣಿವೆಯಲ್ಲಿ ಕಂಡ ಶಾಲೆಯು ಪುಟ್ಟ ಆಟಿಕೆಯಂತೆ ಕಾಣುತ್ತಿತ್ತು.

ಜನ ಜಂಗುಳಿ, ವಾಹನಗಳಿಂದ ದೂರವಾದ ಈ ಪ್ರದೇಶ ಕಥೆಗಳಲ್ಲಿ ಬರುವ ಕಿನ್ನರ ಲೋಕದಂತೆ ಭಾಸವಾಗುತ್ತಿತ್ತು. ಹಳ್ಳಿಯಲ್ಲಿದ್ದ ಪುಟ್ಟ ದೇವಸ್ಥಾನವನ್ನು ನೋಡಿಕೊಂಡು ಬರುವಾಗ ಅಲ್ಲಿ ಮಾಡುತ್ತಿದ್ದ ಆಲೂಗಡ್ಡೆಯ ಬೋಂಡವನ್ನು ಮರೆಯದೇ ಸವಿದೆವು. ಅಪರೂಪ ಎನಿಸುವಂಥ ಅನೇಕ ಸುಂದರ ದೃಶ್ಯಗಳನ್ನು ಮನದುಂಬಿಸಿಕೊಂಡು, ದೇವರ ಸೃಷ್ಟಿಗೆ ಅಚ್ಚರಿಪಡುತ್ತಾ ಹಿಂತಿರುಗಿದೆವು.

ಶಿವನ ಚಳಿಗಾಲದ ವಾಸಸ್ಥಾನವಾದ ಕಿನ್ನೂರ್ ಕೈಲಾಷವನ್ನು ನೋಡಿಕೊಂಡು ನಾರ್ಕುಂಡ ತಲುಪಿದೆವು. ಪೈನ್ ಮರಗಳು ಎತ್ತರಕ್ಕೆ ಬೆಳೆದು ಆಕಾಶವೇ ಕಾಣದಂತೆ ಒತ್ತೊತ್ತಾಗಿ, ಮಿರುಗುತ್ತಿದ್ದವು. ಅಲ್ಲಿ ಬೆಟ್ಟದ ಮೇಲೆ ಹಟುಮಾತ ದೇವಸ್ಥಾನವಿದೆ. ಅಲ್ಲಿಂದ ಹಿಮಾಲಯದ ದೃಶ್ಯ ಅದ್ಭುತವಾಗಿ ಕಾಣಿಸುತ್ತದೆ. ಕಣಿವೆ, ಕಾಡುಗಳ ಚೆಲುವು ವರ್ಣಿಸಲಾಗದು. ಅಲ್ಲಲ್ಲಿ ಬಿದ್ದ ಬಿಸಿಲಿನ ಛಾಯೆ ಬೆಟ್ಟಕ್ಕೆ ಹೊದಿಸಿದ ಚಾದರದಂತೆ ಕಾಣುತ್ತಿತ್ತು.